ಮಲಗಿದ್ದವರು ಎದ್ದು ಕುಳಿತರು. ಹುಚ್ಚು ಹಿಡಿದಿದೆಯಾ ನಿಂಗೆ? ಯಾವುದರಿಂದ ಬಿಡುಗಡೆ? ಆ್ಞಂ?

ಈ ಸತ್ತು ಹೋಗಿರುವ ಸಂಬಂಧದಿಂದ ಬಿಡುಗಡೆ.. ಈಗಲ್ಲ.. ನೀವು ಚುನಾವಣೆಗೆ ನಿಂತ್ಕೊಳಿ.. ನಾನು ಪ್ರಚಾರ ಮಾಡುತ್ತೇನೆ. ನಿಮ್ಮೊಂದಿಗೆ ಬೀದಿ ಬೀದಿ ತಿರುಗುತ್ತೇನೆ. ನನ್ನ ಗಂಡನಿಗೆ ಮತ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ನೀವು ಗೆದ್ದ ಮೇಲೆ ನಂಗೆ ಬಿಡುಗಡೆ ಕೊಡಿ... ವಿಚ್ಛೇದನ ಬೇಕು ನಂಗೆ... ಪರಿಹಾರ ಬೇಡ... ದೃಢವಾಗಿ ಹೇಳಿದೆ.

ಹುಂ... ಯಾಕೆ? ನನ್ನ ಆಸ್ತಿಯಲ್ಲಿ ಅರ್ಧ ಕೊಡುತ್ತೆ ಕೋರ್ಟ್.. ಬೇಡವೇ?.. ವ್ಯಂಗ್ಯವಾಗಿ ಮಾತನಾಡಿ ಉಗುಳು ನುಂಗಿದ.

ಬೇಡ.. ಬಿಡುಗಡೆ ಬೇಕಷ್ಟೇ.. ದೃಢವಾಗಿ ಹೇಳಿದೆ.

ಕಾರಣ ಕೇಳತ್ತೆ, ಕೋರ್ಟ್.. ಇಬ್ಬರೂ ಒಪ್ಪಿ ವಿಚ್ಛೇದನ ಪಡೀತೀವಿ ಅಂದರೂ ಸಹ ಕಾರಣ ಕೇಳುತ್ತೆ... ಏನಿದೆ ಕಾರಣ ನಿಂಗೆ? ಆ್ಞಂ?.. ಕುಹಕ ದನಿ.

ವಿವಾಹಬಾಹಿರ ಸಂಬಂಧ?.. ಅದು ಕಾರಣ ಆಗೊಲ್ವಾ?.. ನಿಧಾನವಾಗಿ ಹೇಳಿದೆ.

ಎದ್ದು ನನ್ನ ಬಳಿ ಬಂದು ಭುಜ ಹಿಡಿದು ಅಲ್ಲಾಡಿಸಿದರು.

ಸಾಬೀತುಪಡಿಸಬಲ್ಲೆಯಾ?.. ನಿಮ್ಮಮ್ಮ, ಅಪ್ಪಾನೇ ಒಪ್ಪಲಿಲ್ಲ!... ನಿನ್ನ ಕರೆದುಕೊಂಡು ಬಂದು ಬಿಟ್ಟು ಹೋದರು ಐದು ವರ್ಷದ ಹಿಂದೆ ನೆನಪಿದೆಯೇ?

ಅವರು ಹಿಡಿದುಕೊಂಡಿದ್ದಕ್ಕೆ ಭುಜ ನೋಯಲು ಶುರುವಾಯಿತು.

ಡೊಮೆಸ್ಟಿಕ್ ವಯೊಲೆನ್ಸ್ ಅಂತ ಕಾರಣ ಕೊಡಲಾ?... ಬಿಡಿ ನನ್ನ! ನೋಯ್ತಾ ಇದೆ ನಂಗೆ...

ನನ್ನ ನೂಕಿ ತಿರುಗಿ ಹೋಗಿ ಮಂಚದ ಮೇಲೆ ಕುಳಿತರು. ಹಿಂದೆ ಇದ್ದ ಬೀರುವಿನ ಸಪೋರ್ಟ್ ತೆಗೆದುಕೊಂಡು ಸಾವರಿಸಿಕೊಂಡೆ.

ಈಗಲೇ ಅಲ್ಲ... ನೀವು ಗೆದ್ದ ಮೇಲಷ್ಟೇ. ನಾನು ಇಲ್ಲಿರೊಲ್ಲ.... ನಿಮ್ಮ ಕಣ್ಣಿಗೆ ಬೀಳೊಲ್ಲ.. ದೂರ ಹೊರಟು ಹೋಗ್ತೀನಿ...

ಮಕ್ಳು?.. ಮಕ್ಳನ್ನ ನಿನ್ನ ಜೊತೆ ಕಳಿಸಲ್ಲ... ವ್ಯಂಗ್ಯವಾಗಿ ತುಟಿಯರಳಿತು.

ಸರಿ.. ದೃಢವಾಗಿ ಹೇಳಿದೆ. ಕಣ್ಣರಳಿಸಿದರು.

ಏನು ಸರಿ?... ನಿನ್ನ ಮಕ್ಕಳು ಬೇಡವೇ ನಿಂಗೆ?.. ತಟ್ಟನೆ ಒಪ್ಪುತ್ತೇನೆ ಎಂದು ಭಾವಿಸಿರಲಿಲ್ಲ ಅವರು.

ಮಕ್ಕಳು ಬೇಕು ನಂಗೆ ಆದರೆ ಆ ಮಕ್ಕಳಿಗೆ ನಾನು ಬೇಡ. ಇಲ್ಲೇ ಇರುವ ನಾನು ಬೇಕೇನೋ.. ಆದರೆ ನಿಮ್ಮನ್ನು, ಇಲ್ಲಿರುವ ಅನುಕೂಲಗಳನ್ನು ಬಿಟ್ಟು ಹೋಗುವ ನಾನು ಖಂಡಿತಾ ಬೇಡ.... ಅನುಕೂಲಗಳಿಗೆ ಸೌಲಭ್ಯಗಳಿಗೆ ಹೊಂದಿಕೊಳ್ಳುವುದು ಸುಲಭ... ಈ ಲಕ್ಷುರೀಸ್ ಎಲ್ಲಾ ಇಲ್ಲದೆ ನಿಮ್ಮ ಮಕ್ಕಳು ಇರಲಾರರು...

ನೀನು ಇರಬಲ್ಲೆಯಾ?... ಈ ಸವಲತ್ತುಗಳನ್ನು ಬಿಟ್ಟು, ಮಕ್ಕಳನ್ನು ಬಿಟ್ಟು. ಈ ಸಮಾಜ ನೀಡಿರುವ ಸ್ಥಾನ ಗೌರವವನ್ನು ಬಿಟ್ಟು?

ಪ್ರಯತ್ನಪಡುತ್ತೇನೆ... ಮೆಲ್ಲನೆ ಹೇಳಿದೆ. ನಿನ್ನ ತಾಯಿ ನಿನ್ನ ಸೇರಿಸುತ್ತಾರೆ ಅಂತ ಅಂದುಕೊಂಡಿದ್ಯಾ?

ನಾನು ಅಲ್ಲಿಗೆ ಹೋಗಲ್ಲ...

ಮತ್ತೆ ಎರಡು ಹೊತ್ತಿನ ಊಟಕ್ಕೆ?... ವ್ಯಂಗ್ಯ, ಅವಹೇಳನ ದನಿ ಕಂಗಳಲ್ಲಿ ತುಂಬಿತ್ತು.

ಅವರ ಕಂಗಳನ್ನೆ ನಿಟ್ಟಿಸಿದೆ. ನನಗರಿವಿಲ್ಲದೆ ನಿಟ್ಟುಸಿರು ಹೊರಬಿತ್ತು.

ಇಷ್ಟು ವರ್ಷ ನನ್ನ ಅನ್ನ ನಾನು ದುಡಿಯಲಾರೆ ಎಂದು ಇಲ್ಲಿದ್ದೇ? ನೀವು... ಬೇಡ ಬೇಡ ಆ ಮಾತು ಬೇಡ. ಎಲ್ಲಾದರು ಕೆಲಸ ಮಾಡುತ್ತೇನೆ.. ನಿಧಾನವಾಗಿ ಹೇಳಿದೆ.

ವೆರಿ ಗುಡ್... ನೀನು ನನಗಾಗಿ ಪ್ರಚಾರ ಮಾಡುವುದು ಬೇಡ. ಇಲ್ಲಿರುವುದೂ ಬೇಡ. ನಾಳೆಯೇ ಹೋಗಬಹುದು... ಟು ವೇರೆವರ್ ಯು ವಾಂಟ್...

ಹಾಸಿಗೆಯ ಪಕ್ಕವಿದ್ದ ಸ್ವಿಚ್ ಅದುಮಿ, ಕೋಣೆಯನ್ನು ಅಂಧಕಾರದಲ್ಲಿ ಮುಳುಗಿಸಿದರು. ಹೊದ್ದಿಕೆ ಹೊದ್ದು ಪಕ್ಕಕ್ಕೆ ತಿರುಗಿದರು.

ಗುಡ್ ನೈಟ್ ಅಂಡ್ ಗುಡ್ ಬೈ..

ಕೋಣೆಯಿಂದ ಆಚೆ ಬಂದು ಬಾಗಿಲು ಮುಂದೆ ಮಾಡಿದೆ.

ಇವರು ರಾಜಕೀಯಕ್ಕೆ ಇಳಿದರೆ ಬಿಟ್ಟು ಹೋಗಬೇಕು ಎನ್ನುವ ನಿರ್ಧಾರ ಗಟ್ಟಿಯಾಗೇ ಇದೆ. ಹೆಂಡತಿ ಬಿಟ್ಟು ಹೋಗಿದ್ದರೆ, ಅವರು ಗೆಲ್ಲುವುದು ಕಷ್ಟವಾಗುತ್ತೆ, ಚುನಾವಣೆಗೆ ನಿಂತು ಅವರು ಗೆದ್ದ ಮೇಲೆ ನನ್ನ ದಾರಿ ನಾನು ನೋಡಿಕೊಂಡು ಹೋಗಬೇಕು ಎಂಬ ನಿರ್ಧಾರ ಮಾಡಿದ್ದು. ಆದರೆ ನಾಳೆಯೇ ಹೋಗಬೇಕು ಅಂದರೆ....

ಓಡಿ ಹೋಗೋ ಬುದ್ಧಿ ಹಾಲಿಗೆ ಹೆಪ್ಪಿಟ್ಟಾಳಾ? ಅಂತ ಅಮ್ಮ ಹೇಳ್ತಾ ಇದ್ದ ಗಾದೆ ನೆನಪಿಗೆ ಬಂತು. ಬಿಟ್ಟು ಹೋಗ್ತೀನಿ ಅಂತ ಅಂದುಕೊಂಡ ಮೇಲೆ ಬಿಟ್ಟು ಹೋಗಬೇಕು. ಹೋದ ಮೇಲೆ ಬದುಕೋದು ಹೇಗೆ ಅಂತ ಪ್ಲಾನ್ ಮಾಡಬೇಕು. ಅದು ಬಿಟ್ಟು ಬಾಯಲ್ಲಿ ಹೋಗ್ತೀನಿ. ಇರೊಲ್ಲ... ಪರಿಹಾರ ಬೇಡ ಮಕ್ಕಳು ಬೇಡ... ಅಮ್ಮನ ಮನೆ ಬೇಡ ಅಂತೆಲ್ಲಾ ಹೇಳಿ...ಇವರು ಚುನಾವಣೆಗೆ ನಿಂತು ಗೆದ್ದ ಮೇಲೆ ಹೋಗ್ತೀನಿ ಎಂದುಕೊಂಡು ಏನೂ ಪ್ಲಾನ್ ಮಾಡದೆ ಕೆಲಸ ಎಲ್ಲಿ ಸಿಗಬಹುದು. ನಾನೇನು ಮಾಡಬಲ್ಲೆ ಎಂಬ ಕಲ್ಪನೆಯೂ ಇಲ್ಲದೆ... ಬರೀ ಮಾತಾಡಿ ಹೀಗೆ ಸಿಕ್ಕಿಹಾಕಿಕೊಳ್ಳುವುದೇ?....

ಸರ್ಟಿಫಿಕೇಟುಗಳನ್ನು ನೋಡಿದರೆ ಓದಿರುವುದು ಪಿ.ಯು.ಸಿ ವರೆಗೆ ಏನು ಕೆಲಸ ಸಿಗುತ್ತೆ? ಕೆಲಸ ಕೇಳಿಕೊಂಡು ಹೋಗುವುದು ಹೇಗೆ? ಎಲ್ಲಿಗೆ? ಈ ಊರು, ಸುತ್ತಾ ಮುತ್ತಾ ಕೆಲಸ ಹುಡುಕೋಕ್ಕೆ ಆಗೊಲ್ಲ... ದೂರ ಹೋಗಬೇಕು.. ದೂರ ಅಂದರೆ ಎಲ್ಲಿಗೆ?. ಬೆಂಗಳೂರು?.. ಮುಂಬಯಿ?.. ದೆಹಲಿ?

ನಿಧಾನವಾಗಿ ಮೆಟ್ಟಿಲಿಳಿದು ಕೆಳಗೆ ಹಾಲಿಗೆ ಬಂದು ಸುತ್ತಾ ಕಣ್ಣಾಡಿಸಿದೆ. ಕತ್ತಲು..

ಕತ್ತಲೆಯ ನೀರವತೆ ದಿಗಿಲು ಹುಟ್ಟಿಸಲಿಲ್ಲ... ಅದರ ಬದಲು ನಿರಾಳವೆನ್ನಿಸಿತು.

ಈ ಕತ್ತಲೆಯಲ್ಲಿ ಕರಗಿ ಹೋಗಬೇಕು. ದೂರದ ಊರೊಂದರಲ್ಲಿ ಜನಜಂಗುಳಿಯಲ್ಲಿ ಕರಗಿ ಹೋಗಬೇಕು. ಇಂಥವರ ಮನೆಯ ಸೊಸೆ. ಇಂಥವನ ಮಡದಿ... ಬೇಡ.. ಯಾವ ಪಟ್ಟವೂ ಬೇಡ.

ನಾಳೆ ಬೆಳಗ್ಗೆ ಪ್ರೀತಿಗೆ ಫೋನ್ ಮಾಡಬೇಕು. ನನಗೆ ಒಂದು ನಾಲ್ಕು ದಿನ ಆಶ್ರಯ ಕೊಡ್ತಾಳಾ ಅಂತ ಕೇಳಬೇಕು... ನಂತರ ಒಂದು ಕೆಲಸ ಹುಡುಕಿ ಕೊಳ್ಳಬೇಕು. ಈ ಬಾರಿ ತಲೆತಗ್ಗಿಸಿಕೊಂಡು ಹಿಂತಿರುಗಬಾರದು. ಇಲ್ಲೂ ತಿಂದು, ಮಲಗಿ ಎದ್ದು ಕೂತು ಬಾಳುತ್ತಿರುವುದು. ಎಲ್ಲಿ ಹೋದರೂ ಅಷ್ಟು ಮಾತ್ರ ಮಾಡಬಲ್ಲೆನಲ್ಲವೇ?.....

ಈಗಿರುವುದು ಎಂಥ ಹೀನಾಯ ಸ್ಥಾನ ನನ್ನದು ಹೊಟ್ಟೆ ಬಟ್ಟೆಗಷ್ಟೇ ಅಲ್ಲ, ಸ್ಥಾನ, ಮಾನ, ಮಕ್ಕಳು, ಒಡವೆ, ವಸ್ತ್ರ.. ಎಲ್ಲಾದಿಕ್ಕೂ ಇವರು ಬೇಕು ನನಗೆ. ಅವರಿಗೆ ನನ್ನ ಅವಶ್ಯಕತೆಯೇ ಇಲ್ಲ... ಪ್ರೀತಿಯಿರಲಿ, ಅವಶ್ಯಕತೆಯೂ ಇಲ್ಲ.. ನಾನೇ ಅಂದುಕೊಂಡಿದ್ದು ಇವರು ಚುನಾವಣೆ ಗೆಲ್ಲಲು ನಾನು ಮಡದಿಯಾಗಿ ಜೊತೆಯಲ್ಲಿ ಇರಬೇಕು, ಪ್ರಚಾರ ಮಾಡಬೇಕು.. ಆಮೇಲೆ ಎಲ್ಲಾ ಬಿಟ್ಟು ಹೋಗಬೇಕು ಎಂದು ಇವರು ರಾಜಕೀಯಕ್ಕೆ ಹೋಗುವುದೇ ನನಗೆ ಇಷ್ಟವಿಲ್ಲ.. ನಾನು ಅಷ್ಟು ಕೇಳಿಕೊಂಡರೂ ಲೆಕ್ಕಿಸದೆ ರಾಜಕೀಯಕ್ಕೆ ಇಳಿಯುತ್ತಿದ್ದಾರೆ. ಹಾಗಾಗಿ ಬಿಟ್ಟು ಹೋಗಬೇಕು..... ಇಷ್ಟರವರೆಗೆ ತರ್ಕ ಸರಿ. ಅವರು ಗೆಲ್ಲುವುದಕ್ಕೆ ಸಹಕರಿಸಿ ಆಮೇಲೆ ಹೋಗಬೇಕು ಹೋಗುತ್ತೇನೆ ಎಂದುಕೊಂಡಿದ್ದು ಮೂರ್ಖತನವಲ್ಲವೇ?.... ಗಟ್ಟಿಯಾಗಿ ನಿಲ್ಲಬೇಕು ಅಂದರೆ ಮನಸ್ಸು ಗಟ್ಟಿ ಮಾಡಿಕೊಳ್ಳಬೇಕು.

ಹಾಲಿನಲ್ಲಿದ್ದ ಸೋಫಾದ ಮೇಲೆ ಕುಳಿತು ಕಾಲು ಚಾಚಿದೆ. ಈ ಮನೆ ನನ್ನದು ಎಂಬ ಭಾವ ಗಟ್ಟಿಯಾಗಲೇ ಇಲ್ಲ... ಯಾಕೆ?... ತಪ್ಪು ನನ್ನದೇ?... ಇವರದೇ?... ಅತ್ತೆಯದೇ?....

ಸೋಫಾ ಮೇಲೆ ಕುಳಿತು ಮೊಬೈಲಿನಲ್ಲಿ ಮಾತಾಡುತ್ತಿದ್ದ ಇವರು ತಲೆ ಎತ್ತಿದರು. ಕಂಡೂ ಕಾಣದಂತೆ ಅರಳುತ್ತಿದ್ದ ಮುಗುಳ್ನಗೆ ಮಾಸಿ ಹುಬ್ಬು ಸಂಕುಚಿತಗೊಳಿಸಿದರು.

ನಿಮ್ಮ ಹಸ್ಬೆಂಡ್ ಏನ್ರೀ?.. ತುಂಬಾ ಹ್ಯಾಂಡ್ಸಮ್ ಆಗಿದ್ದಾರೆ... ಆ್ಞಂ... ಅವರನ್ನ ಈ ಮುಂಚೆ ಭೇಟಿ ಮಾಡಿದ್ದೀನಿ... ಎಲ್ಲಿರಬಹುದು..?... ಸ್ವಗತವೆಂಬಂತೆ ಹೇಳಿಕೊಂಡರೂ ಅವನತ್ತ ಅಚ್ಚರಿಯಿಂದ ನೋಡಿದೆ. ಅವನು ಮುಂದೆ ನಡೆದ. ಪರಿಚಯ ಹೇಗೆ ಮಾಡಿಸುವುದು ಅಂತ ಯೋಚಿಸುತ್ತಾ ನನ್ನ ನಡಿಗೆ ಕೊಂಚ ನಿಧಾನವಾಯಿತು. ವಿಶ್ವಾಸ್ ನನ್ನ ದಾಟಿ ಮುಂದೆ ಹೋಗಿ ವಿಕ್ರಮ್ ಮುಂದೆ ನಿಂತು ಬಲಗೈ ಚಾಚಿದ.

ಹಲೋ... ನಾನು ವಿಶ್ವಾಸ್ ದೇಶಪಾಂಡೆ ಅಂತ... ನಿಮ್ಮ ವೈಫ್ ನಡೆಸೋ